ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಹೌದು.

ಆ) ಜಿಲ್ಲೆಯಲ್ಲಿ ದೊಡ್ಡ ಹಿಡುವಳಿದಾರರು ಸರ್ಕಾರಿ ಜಮೀನು ಒತ್ತುವರಿ ಮಾಡಿ ಕಾಫಿ ಸಾಗುವಳಿ ಮಾಡಿರುವ ಜಮೀನಿನ ಅಂದಾಜು ವಿವರ ಕೆಳಗಿನಂತಿದೆ.

ಕ್ರ.ಸಂ.	ತಾಲ್ಲೂಕು	ಒತ್ತುವರಿ ವಿಸ್ತೀರ್ಣ ಎಕರೆ:ಗುಂಟೆ
1.	ಚಿಕ್ಕಮಗಳೂರು	12972–35
2.	ಕೊಪ್ಪ	1841–03
3.	ಶೃಂಗೇರಿ	280–06
4.	ಮೂಡಿಗೆರೆ	12267–03
5.	ನರಸಿಂಹರಾಜಪುರ	2706–35
6.	ತರೀಕೆರೆ	215–00
7.	ಕಡೂರು	50–00
	ಒಟ್ಟು	**30333–02**

ಒತ್ತುವರಿ ವಿಸ್ತೀರ್ಣವು ಅಂದಾಜಿನದಾಗಿದ್ದು ಸರ್ವೆ ಮೂಲಕ ಗುರುತಿಸಿದಲ್ಲಿ ವ್ಯತ್ಯಾಸವಾಗುವ ಸಾಧ್ಯತೆ ಇರುತ್ತದೆ. ಒತ್ತುವರಿದಾರರ ಹೆಸರು, ವಿಳಾಸ ಮತ್ತು ವಿಸ್ತೀರ್ಣದ ವಿವರಗಳನ್ನು ನಿಖರವಾಗಿ ನೀಡಲು ಕಾಲಾವಕಾಶದ ಅಗತ್ಯವಿರುತ್ತದೆ. ಭೂ ಕಂದಾಯ ಕಾಯಿದೆಯ ಕಲಂ 94ಎ ಮತ್ತು 94ಬಿ ಪ್ರಕಾರ ಒತ್ತುವರಿದಾರನು ಹೊಂದಿರುವ ಜಮೀನೂ ಸೇರಿ 4.38 ಎಕರೆವರೆಗೆ ಮಾತ್ರ ಸಕ್ರಮಗೊಳಿಸಲು ಅವಕಾಶವಿರುವುದರಿಂದ, ಈ ಮಿತಿಗಿಂತ ಹೆಚ್ಚು ಜಮೀನು ಹೊಂದಿದ ಎಲ್ಲಾ ಒತ್ತುವರಿದಾರರೂ ದೊಡ್ಡ ಹಿಡುವಳಿದಾರರಾಗುವುದರಿಂದ, ದೊಡ್ಡ ಕಾಫಿ ಪ್ಲಾಂಟರುಗಳನ್ನು ಗುರುತಿಸಲು ನಿರ್ದಿಷ್ಟ ಮಾನದಂಡದ ಅಗತ್ಯವಿದೆ.

767 (1196) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಳ್ಳಾರಿ ಪ್ರಾದೇಶಿಕ ಅರಣ್ಯ ವಿಭಾಗ ಮತ್ತು ನೆರೆಯ ಆಂಧ್ರ ಪ್ರದೇಶ ರಾಜ್ಯದ ಗಡಿ ರೇಖೆಯ ವಿವಾದವನ್ನು ಬಗೆ ಹರಿಸಿಕೊಳ್ಳುವವರೆವಿಗೂ ವಿವಾದದ ಮೀಸಲು ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಹಾಗೂ ವೇಸ್ಟ್‌ಡಂಪ್‌ಗಳನ್ನು (ಕಬ್ಬಿಣದ ಅದಿರಿನ ಕಸ) ತೆಗೆಯಬಾರದೆಂದು ಸರ್ವೋಚ್ಚ ನ್ಯಾಯಾಲಯವು 2006ರ ಫೆಬ್ರವರಿ ಮತ್ತು ಏಪ್ರಿಲ್ ತಿಂಗಳಲ್ಲಿ ತಡೆಯಾದೇಶವನ್ನು ನೀಡಿ ಅರಣ್ಯ ಮತ್ತು ಗಣಿ ಇಲಾಖೆಯ ಜಂಟಿ ಸಮೀಕ್ಷೆಗೆ ಆದೇಶ ನೀಡಿರುವುದು ನಿಜವೇ ;

ಆ) ಹಾಗಿದ್ದಲ್ಲಿ, ಈ ವಿಷಯ ನ್ಯಾಯಾಲಯದ ಮುಂದಿದ್ದರೂ ಸಹ ಹಲವಾರು ಗಣಿ ಸಂಸ್ಥೆಗಳಿಗೆ (ಉದಾ: ಬ್ಲಾಕ್ ಗೋಲ್ಡ್ ಮೈನ್ಸ್) ವೇಸ್ಟ್ ಡಂಪ್‌ಗಳನ್ನು ಸಾಗಿಸಲು ಸರ್ಕಾರ ಅನುಮತಿ ನೀಡಿದೆಯೇ ; (ಅನುಮತಿ ನೀಡಿರುವ ದಿನಾಂಕವು ಸೇರಿದಂತೆ ಇತರೆ ವಿವರಗಳನ್ನು ಒದಗಿಸುವುದು) ;

ಇ) ಹಾಗಿದ್ದಲ್ಲಿ, ಇದು ನ್ಯಾಯಾಂಗ ನಿಂದನೆಯಾಗಲಿಲ್ಲವೇ ;

ಈ) ಈ ರೀತಿ ಅನುಮತಿ ಪಡೆದುಕೊಂಡಿರುವ ಸಂಸ್ಥೆಗಳು ವೇಸ್ಟ್ ಡಂಪ್ ಸಾಗಾಟದ ನೆಪದಲ್ಲಿ ಅಪಾರ ಪ್ರಮಾಣದ ಹೊಸ ಗಣಿಗಾರಿಕೆ ನಡೆಸಿರುವುದು ನಿಜವೇ ;

ಉ) ಈ ವಿಷಯವನ್ನು ಸರ್ವೋಚ್ಚ ನ್ಯಾಯಾಲಯವು ಗಂಭೀರವಾಗಿ ಪರಿಗಣಿಸಿ ಸಂಬಂಧಪಟ್ಟ ಡಿ.ಸಿ.ಎಫ್ ಸೇರಿದಂತೆ ಯಾರ್ಯಾರಿಗೆ ನೋಟೀಸ್ ಜಾರಿ ಮಾಡಿದೆ ; (ಹೆಸರು ವಿವರಗಳನ್ನು ಒದಗಿಸುವುದು) ;

ಊ) ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿ ಪರ್ಮಿಟ್ ನೀಡಿರುವ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಸಿ. ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ರಿಟ್ ಅಪೀಲು ಸಂಖ್ಯೆ: 2825/2005ಕ್ಕೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ 10/11-8-2005ರಲ್ಲಿ ನೀಡಿದ ಆಜ್ಞೆಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 24-2-2006 ರಂದು ತಡೆಯಾಜ್ಞೆ ಆದೇಶವನ್ನು ನೀಡಿ ಮೆ: ಬ್ಲಾಕ್‌ಗೋಲ್ಡ್ ಕಂಪನಿಯವರು ಅರಣ್ಯ ಪ್ರದೇಶದಿಂದ ವೇಸ್ಟ್ ಡಂಪನ್ನು ತೆಗೆಯದಂತೆ ಆದೇಶಿಸುತ್ತದೆ.

ಆ) ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 1656/2005 ದಿನಾಂಕ: 13-9-2005 ಹಾಗೂ ರಿಟ್ ಅಪೀಲ್ ಸಂಖ್ಯೆ: 2825/2005 ಮತ್ತು ನಿಂದನಾ ಅರ್ಜಿ ಸಂಖ್ಯೆ 266/2005 (ಸಿವಿಲ್) ದಿನಾಂಕ: 11-8-2005ರಲ್ಲಿ ನೀಡಿರುವ ಆದೇಶಗಳಿಗನುಗುಣವಾಗಿ ಮೆ: ಬ್ಲಾಕ್ ಗೋಲ್ಡ್ ಮೈನ್ಸ್‌ನವರಿಗೆ ವೇಸ್ಟ್ ಡಂಪ್‌ಗಳನ್ನು ಸಾಗಿಸಲು ಅನುಮತಿ ನೀಡಲಾಗಿತ್ತು. ತದನಂತರ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ತಡೆಯಾಜ್ಞೆಯಂತೆ ವೇಸ್ಟ್ ಡಂಪ್‌ಗಳನ್ನು ಸಾಗಿಸಲು ನೀಡಿದ ಅನುಮತಿಯನ್ನು ಹಿಂತೆಗೆದುಕೊಳ್ಳಲಾಗಿದೆ ಹಾಗೂ ಸರ್ವೋಚ್ಚ ನ್ಯಾಯಾಲಯವು ನೀಡಿದ ಆದೇಶದ ನಂತರ ಯಾವುದೇ ಗಣಿ ಸಂಸ್ಥೆಗಳಿಗೆ ವೇಸ್ಟ್ ಡಂಪನ್ನು ಸಾಗಿಸಲು ಅನುಮತಿ ನೀಡಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ದಿನಾಂಕ: 11-7-2006 ರಂದು ನಡೆಸಿದ ಜಂಟಿ ಸಮೀಕ್ಷೆ ವರದಿಯಲ್ಲಿ ಜಂಟಿ ಸಮಿತಿಯು ಈ ಹಿಂದೆ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ

ವೇಸ್ಟ್ ಡಂಪ್ಸ್‌ಗಳನ್ನು ತೆಗೆಯಲು ಮೆ: ಬ್ಲಾಕ್ ಗೋಲ್ಡ್ ಮೈನ್ಸ್‌ಗೆ ಅನುಮತಿ ನೀಡಿದ ಸಮಯದಲ್ಲಿ ಮೆ: ಬ್ಲಾಕ್ ಗೋಲ್ಡ್ ಮೈನ್ಸ್ ಸಂಸ್ಥೆಯವರು ಹಳೆಯ ಡಂಪ್ಸ್ ಜೊತೆಗೆ ಹೊಸ ಅದಿರನ್ನು ಸಾಗಿಸಿರುವ ಬಗ್ಗೆ ವರದಿಯನ್ನು ನೀಡಿರುತ್ತದೆ ಹಾಗೂ ಇದರ ಬಗ್ಗೆ ಅರಣ್ಯ ತಕ್ಷೀರು ದಾಖಲು ಮಾಡಿಕೊಳ್ಳಲಾಗಿದೆ.

ಊ) ಈ ಬಗ್ಗೆ ಇಲ್ಲಿಯವರೆಗೆ ಯಾವುದೇ ನೋಟೀಸ್ ಜಾರಿಯಾಗಿರುವುದಿಲ್ಲ.

ಋ) ಉದ್ಭವಿಸುವುದಿಲ್ಲ.

768 (1197) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ): ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 ವರ್ಷಗಳ ಅವಧಿಯಲ್ಲಿ ಗಡಿ ಪ್ರದೇಶದ ಅಭಿವೃದ್ಧಿ ನಿಧಿಯ ಯೋಜನೆಯಿಂದ (ಬಿ.ಎ.ಡಿ.ಪಿ) ಹೈದ್ರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳೇನು ಹಾಗೂ ಇದಕ್ಕಾಗಿ ಬಿಡುಗಡೆ ಮಾಡಿರುವ ಹಣವೆಷ್ಟು ; (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು) ;

ಆ) ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯಿಂದ ಮೇಲ್ಕಂಡ ಭಾಗದಲ್ಲಿ ಚಾಲನೆಯಲ್ಲಿರುವ ಕಾರ್ಯಕ್ರಮಗಳಾವುವು ; (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು) ?

ಶ್ರೀ ರಾಮಚಂದ್ರ ಗೌಡ (ಯೋಜನಾ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿದ ಹಣವ ವಿವರ ಕೆಳಕಂಡಂತಿದೆ.

ಜಿಲ್ಲೆ	2003–04	2004–05	ರೂ. ಲಕ್ಷಗಳಲ್ಲಿ 2005–06
ಬೀದರ್	3.80	42.60	45.85
ಗುಲ್ಬರ್ಗ	10.04	39.16	42.60
ರಾಯಚೂರು	1.52	13.04	13.14
ಬಳ್ಳಾರಿ	22.52	19.56	19.71

ರಸ್ತೆ ಮತ್ತು ಸೇತುವೆ, ಶಾಲಾ ಕೊಠಡಿಗಳು, ಆಸ್ಪತ್ರೆ, ಅಂಗನವಾಡಿ ಹಾಗೂ ಪಶುವೈದ್ಯ ಕಟ್ಟಡಗಳು, ಗ್ರಾಮೀಣ ನೀರು ಸರಬರಾಜು ಕಾಮಗಾರಿಗಳು ಹಾಗೂ ಗ್ರಾಮೀಣ ವಿದ್ಯುದ್ದೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಆ) ಈ ಕಾರ್ಯಕ್ರಮದಡಿ ಹಣವನ್ನು ಜಿಲ್ಲಾಧಿಕಾರಿಗಳಿಗೆ ತಾಲ್ಲೂಕುವಾರು ಬಿಡುಗಡೆ ಮಾಡಲಾಗಿದೆ. ವಿಧಾನಸಭಾ ಕ್ಷೇತ್ರವಾರು ಹಣ ಬಿಡುಗಡೆ ಮಾಡುವುದಿಲ್ಲ. ಪ್ರಸಕ್ತ ವರ್ಷದಲ್ಲಿ 13.11.2006ರಂದು 382 ಲಕ್ಷ ರೂ.ಗಳನ್ನು ತಾಲ್ಲೂಕಿಗೆ ತಲಾ 7.35 ಲಕ್ಷ ರೂ.ಗಳಂತೆ ಬಿಡುಗಡೆ ಮಾಡಲಾಗಿದೆ. ಈ ಹಣಕ್ಕೆ ಕ್ರಿಯಾ